# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
## ಶ್ರೀ ದೇವರಾಜಅರಸ್ ಬಡಾವಣೆ, ಟಮಕ, ಕೋಲಾರ–563 103


ಸಂಖ್ಯೆ: ಬೆಂ.ಉ.ವಿ/ಕು.ಸ.ಕಾ/ಕಾ.ಹೆ.ಬ/609/2020–21 ದಿನಾಂಕ: 22.07.2021

## ಅಧಿಸೂಚನೆ

**ವಿಷಯ:**–ಡಾ.ಕರಿಯಪ್ಪ ಸ್ಕೂಲ್ ಆಫ್ ಆರ್ಟ್ ಅಂಡ್ ಡಿಸೈನ್ ಮ್ಯಾನೇಜ್‌ಮೆಂಟ್, ಕಾಲೇಜಿನ ಹೆಸರು ಬದಲಾವಣೆಯ ಬಗ್ಗೆ.

**ಉಲ್ಲೇಖ:**–01. ಸರ್ಕಾರದ ಪತ್ರ ಸಂಖ್ಯೆ:– ಇ– ಕಛೇರಿ ಸಂ: ಇಡಿ 194 ಯುಬಿವಿ 2021, ದಿನಾಂಕ:– 12.07.2021

02. **ತಿದ್ದುಪಡಿ** ಸರ್ಕಾರದ ಪತ್ರ ಸಂಖ್ಯೆ:– ಇ– ಕಛೇರಿ ಸಂ: ಇಡಿ 194 ಯುಬಿವಿ 2021, ದಿನಾಂಕ:– 12.07.2021

03. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:–22.07.2021

***

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣದ 59ನೇ ಪ್ರಕರಣದ (5) ಮತ್ತು (11) ನೇ ಉಪಪ್ರಕರಣದನ್ವಯ ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು 2020–21 ನೇ ಶೈಕ್ಷಣಿಕ ಸಾಲಿನಿಂದ ಡಾ. ಕರಿಯಪ್ಪ ಸ್ಕೂಲ್ ಆಫ್ ಆರ್ಟ್ ಅಂಡ್ ಡಿಸೈನ್ ಮ್ಯಾನೇಜ್‌ಮೆಂಟ್, ಪ್ಲಾಟ್–ನಂ–45, 48, ಅಪಾರಲ್ ಪಾರ್ಕ್, 2ನೇ ಹಂತ ದೊಡ್ಡಬಳ್ಳಾಪುರ ಈ ಕಾಲೇಜಿನ ಹೆಸರನ್ನು **ಡಾ. ಕರಿಯಪ್ಪ ಬಿಸಿನೆಸ್ ಸ್ಕೂಲ್** ಎಂದು ಬದಲಾವಣೆ ಮಾಡಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮತಿ ನೀಡಿದೆ.

**ಷರತ್ತುಗಳು:**

01. ಕಾಲೇಜಿನ ಹೆಸರು ಬದಲಾವಣೆಯಿಂದ ವಿದ್ಯಾರ್ಥಿಗಳು ಮತ್ತು ಪೋಷಕರಿಂದಯಾವುದೇ ದೂರುಗಳು ಬರದಂತೆ ಕಾಲೇಜು ಖಚಿತ ಪಡಿಸಿಕೊಳ್ಳತಕ್ಕದ್ದು.
02. ಕಾಲೇಜಿನ ಹೆಸರು ಬದಲಾವಣೆಯಿಂದ ಸಂಯೋಜನೆ/ಮುಂದುವರಿಕೆ ಸಂಯೋಜನೆಗೆ ಪೂರಕವಾಗಿ ವಿಧಿಸಲಾಗಿರುವ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಅವು ಯಥಾಸ್ಥಿತಿ ಮುಂದುವರೆಯುತ್ತವೆ.
03. ಸ್ಥಳೀಯ ವಿಚಾರಣಾ ಸಮಿತಿಯ ಪ್ರತಿಯೊಂದು ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
04. ಒಂದು ಪಕ್ಷಕಾಲೇಜಿನ ಆಡಳಿತ ಮಂಡಳಿಯವರು ಈ ಷರತ್ತುಗಳನ್ನು ಅನುಸರಿಸದಿದ್ದಲ್ಲಿ ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಕಾಲೇಜಿನ ಸಂಯೋಜನಾ ನವೀಕರಣವನ್ನು ನೀಡಲಾಗುವುದಿಲ್ಲ ಮತ್ತು ವಿದ್ಯಾರ್ಥಿಗಳ ಪ್ರವೇಶವನ್ನು ಅನುಮೋದಿಸಲಾಗುವುದಿಲ್ಲ.
05. ಕಾಲೇಜಿನ ಹಳೆಯ ಹೆಸರಿನ ಆಧಾರದ ಮೇಲೆ ಯಾವುದೇ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಳ್ಳಬಾರದು.
06. ಕಾಲೇಜಿನ ಹೆಸರು ಬದಲಾವಣೆಯ ಅಧಿಸೂಚನೆ ಪತ್ರ ತಲುಪಿದ 30 ದಿನಗಳಲ್ಲಿ ಕಾಲೇಜಿನ ಹೆಸರು ಬದಲವಣೆ ಬಗ್ಗೆ ದಿನ ಪತ್ರಿಕೆಯಲ್ಲಿ ಪ್ರಕಟಿಸಬೇಕು.

22/7

**ಕುಲಸಚಿವರು**

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕ, ಕೋಲಾರ – ಕರ್ನಾಟಕ – 563 103.

**ಗೆ,**

ಪ್ರಾಂಶುಪಾಲರು,
ಡಾ.ಕರಿಯಪ್ಪ ಸ್ಕೂಲ್ ಆಫ್ ಆರ್ಟ್ ಅಂಡ್ ಡಿಸೈನ್ ಮ್ಯಾನೇಜ್‌ಮೆಂಟ್,
ಪ್ಲಾಟ್–ನಂ–45, 48, ಅಪಾರಲ್ ಪಾರ್ಕ್, 2ನೇ ಹಂತ ದೊಡ್ಡಬಳ್ಳಾಪುರ

**ಪ್ರತಿಗಳು,**

**01.** ಸರ್ಕಾರದಅಪರ ಮುಖ್ಯ ಕಾರ್ಯದರ್ಶಿಯವರು, ಉನ್ನತಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–1.
**02.** ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
**03.** ಕಾಲೇಜು ಶಿಕ್ಷಣ ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು.
**04.** ಆಪ್ತ ಕಾರ್ಯದರ್ಶಿ, ಮಾನ್ಯ ಕುಲಪತಿಗಳು/ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಶ್ರೀ ದೇವರಾಜಅರಸು ಬಡಾವಣೆ, ಟಮಕ, ಕೋಲಾರ –563 103.
**05.** ಕಛೇರಿ ಪ್ರತಿ.